ಅಧ್ಯಕ್ಷರು : ಮಾನ್ಯ ಖರ್ಗೆಯವರೆ, ತಾವು ತೊಗರಿ ಬೇಳೆ ವಿಷಯವಾಗಿ ಹೇಳಿ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ...

ಅಧ್ಯಕ್ಷರು : ನೀವು ಪುನಃ ಇಲ್ಲಿಗೆ ಬರಬೇಕು.

ಅಧ್ಯಕ್ಷರು : ಹೌದು ಸಾರ್. ತಾವೂ ಇರಬೇಕು. ನಾನು ಇರಬೇಕು, ಮುಖ್ಯಮಂತ್ರಿಗಳು ಇರಬೇಕು ಸಾರ್.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಮುಖ್ಯ ಮಂತ್ರಿಗಳು ಸ್ಪಷ್ಟವಾಗಿ ನಾನು ನಿಮಗೆ ನೀರು ಕುಡಿಸೇ ಬಿಡುತ್ತೇನೆ ಎಂದು ಹೇಳಿದರು. ಅಂದರೆ ಏನು ಅರ್ಥ? ನೀವು ಬೇಗ ಬೇಗನೆ ಅಂದರೆ ಮುಂದಿನ ಚುನಾವಣೆಯೊಳಗೆ ಮಾಡಿ ಎಂದು ಹೇಳಿದಿರಿ. ಅದಕ್ಕೆ ಅವರು ನೀರು ಕುಡಿಸೇ ಬಿಡುತ್ತೇವೆ ನೋಡುತ್ತಿರಿ ಎಂದು ಹೇಳಿದರು.

ಶ್ರೀ ವಾಟಾಳ್ ನಾಗರಾಜ್ : ನೀರು ಕುಡಿಸುತ್ತೇವೆ ಎಂದು ಹೇಳಿದುದರ ಅರ್ಥ ಏನೆಂದರೆ ನಮ್ಮ ಊರು, ತಾಲ್ಲೂಕಿನ ಜನರಿಗೆಲ್ಲಾ ನೀರು ಕೊಡುತ್ತೇವೆಂದು ಅರ್ಥ

ಶ್ರೀ ಜೆ. ಹೆಚ್. ಪಟೇಲ್ : ನೀರು ಕುಡಿಸುವುದು ಎಂದರೆ ಒಂದು ಅರ್ಥ ನೀರು ಬಿಡುವುದು ಒಂದು ಅರ್ಥ. ನಿಮಗೆ ನೀರು ಬಿಡುತ್ತೇವೆ. ಅವರಿಗೆ ನೀರು ಕುಡಿಸುತ್ತೇವೆ.

(ನಗು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಮಗೆ ನೀರು ಬಿಡುತ್ತೇವೆ ಅವರಿಗೆ ನೀರು ಕುಡಿಸುತ್ತೇವೆ ಎಂದರು. ನೋಡಿ ಇಲ್ಲೇ ಬದಲಾವಣೆ ಮಾಡಿದರು. ಆದರೂ ಕೂಡ ನೀವು ನೀರು ಎಷ್ಟೇ ಬಿಟ್ಟರೂ ಕೂಡ ಆ ನೀರಿನಲ್ಲಿ ಹರಿದುಕೊಂಡು ಹೋಗತಕ್ಕಂಥ, ಅದರಲ್ಲಿ ಈಜುವಂತಹ ಶಕ್ತಿ ನಮಗೆ ಇದೆ. ನಾವು ಈಜಾಡಿಯೇ ಬರುತ್ತೇವೆ.

ಶ್ರೀ ಕುಂಬ್ಳೆ ಸುಂದರರಾವ್ : ನಮ್ಮಲ್ಲಿ ನೀರು ಬಿಡುವಾಗ ರಾಮ ರಾಮ ಎಂದು ಹೇಳುವ ಕೆಲಸ ಉಂಟು. ಅವರು ಇವರಿಗೆ ನೀರು ಬಿಡುತ್ತಾರೆ ಎಂದು ಹೇಳಿದರೆ ನಾವು ರಾಮ ರಾಮ ಎಂದು ಹೇಳಿ ಕಳುಹಿಸುತ್ತೇವೆ.

ಏ) : ಗುಲ್ಬರ್ಗಾ ವಿಭಾಗದ ತೊಗರಿ ಬೇಳೆ ಧಾರಣೆಯಲ್ಲಿ ಕುಸಿತ

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಗುಲ್ಬರ್ಗ ವಿಭಾಗದಲ್ಲಿ ತೊಗರಿ ಬೇಳೆ ಪ್ರೈಸ್ ಕ್ವಿಂಟಾಲಿಗೆ ಇವತ್ತಿನ ರೇಟಿನ ಪ್ರಕಾರ ಸುಮಾರು 1,350 ರಿಂದ 1,550 ರೂಪಾಯಿವರೆಗೂ ಬಂದಿದೆ. ಆ ಭಾಗದಲ್ಲಿ ಸುಮಾರು ನಾಲ್ಕು ಲಕ್ಷ ಹೆಕ್ಟೇರಿನಲ್ಲಿ ಸುಮಾರು ಐದು ಲಕ್ಷ ಟನ್ ತೊಗರಿ ಬೇಳೆ ಬೆಳೆಯುತ್ತಾರೆ. ಆದರಲ್ಲೂ ವಿಶೇಷವಾಗಿ ಗುಲ್ಬರ್ಗದಲ್ಲಿ ಸುಮಾರು ಎರಡು ಲಕ್ಷ 21 ಸಾವಿರ ಹೆಕ್ಟೇರಿನಲ್ಲಿ, ಬೀದರ್‌ನಲ್ಲಿ ಸುಮಾರು 51 ಸಾವಿರ ಹೆಕ್ಟೇರಿನಲ್ಲಿ ರಾಯಚೂರಿನಲ್ಲಿ 40 ಸಾವಿರ, ಬಿಜಾಪುರದಲ್ಲಿ 30 ಸಾವಿರ ಧಾರವಾಡದಲ್ಲಿ 27 ಸಾವಿರ, ಬಳ್ಳಾರಿಯಲ್ಲಿ 20 ಸಾವಿರ ಹೆಕ್ಟೇರಿನಲ್ಲಿ ತೊಗರಿಬೇಳೆ ಬೆಳೆಯುತ್ತಾರೆ. ಸುಮಾರು

4 ಲಕ್ಷ ಹೆಕ್ಟೇರಿನಲ್ಲಿ ತೊಗರಿ ಬೇಳೆ ಬೆಳೆಯುವಂತಹ ವ್ಯವಸ್ಥೆ ಇದೆ. ಆ ಭಾಗದಲ್ಲಿ ಇದು ಒಂದು ಮೇಜರ್ ಕ್ರಾಪ್. ಆದರೆ ಇವತ್ತು ಅದರ ಬೆಲೆ ಕುಸಿದು ಬೀಳುತ್ತಾ ಇದೆ. ಹೋದ ವರ್ಷ ಜನವರಿ 1996 ರಲ್ಲಿ 1,450 ಮಿನಿಮಂ ಮತ್ತು ಮ್ಯಾಕ್ಸಿಮಂ 2,000 ಇತ್ತು. ಆದರೆ ಇವತ್ತು ಮಿನಿಮಂ 1,350 ಮತ್ತು ಮ್ಯಾಕ್ಸಿಮಂ 1,250. ಹೀಗಿರುವುದರಿಂದ ಅನೇಕ ರೈತರಿಗೆ ತೊಂದರೆಯಾಗುತ್ತಾ ಇದೆ. ಅಲ್ಲಿ ಕಾಸ್ಟ್ ಆಫ್ ಕಲ್ಟಿವೇಶನ್ ಪರ್ ಏಕರೆಗೆ ಮಿನಿಮಂ ಅಂದರೆ 1,300 ರಿಂದ 1,600 ರೂಪಾಯಿಗಳವರೆಗೆ ಇದೆ. ಅದಕ್ಕಾಗಿ ಅವರು ಬೆಳೆಯತಕ್ಕಂಥದ್ದು ಮತ್ತು ಔಷಧಿ ಖರ್ಚು ಇತ್ಯಾದಿಗೆ ಖರ್ಚು ಮಾಡತಕ್ಕಂಥದ್ದನ್ನು ಹೋಲಿಸಿದಾಗ ಅವರಿಗೆ ಸ್ವಲ್ಪ ಕೂಡ ಪ್ರಾಫಿಟಬಲ್ ಇಲ್ಲ, ನೋ ಲಾಸ್ ನೋ ಪ್ರಾಫಿಟ್ ಕೂಡ ಇಲ್ಲ. ಅದಕ್ಕಾಗಿ ನಾವು ಒತ್ತಾಯ ಕೂಡ ಮಾಡಿದ್ದೆವು. ಒಂದು ಪತ್ರವನ್ನು ಕೂಡ ಸಂಬಂಧಪಟ್ಟವರಿಗೆ ಬರೆದಿದ್ದೆ. ಏಕೆಂದರೆ ಮಾರ್ಕೆಟಿಂಗ್ ಫೆಡರೇಷನ್ ಮುಖಾಂತರವಾದರೂ ತೊಗರಿ ಬೇಳೆಯನ್ನು ಖರೀದಿ ಮಾಡತಕ್ಕಂಥದ್ದು ಇಲ್ಲವೇ ಫುಡ್ ಕಾರ್ಪೂರೇಷನ್ ಆಫ್ ಇಂಡಿಯಾದವರು ಇದರಲ್ಲಿ ಎಂಟರ್ ಆದರೆ ಸ್ವಲ್ಪ ಪ್ರೈಸನ್ನು ಸ್ಟೆಬಲೈಸ್ ಮಾಡುವುದಕ್ಕಾಗುತ್ತದೆ. ಇಲ್ಲ ಅಂದರೆ ಅವರಿಗೆ ತೊಂದರೆ ಆಗುತ್ತದೆ. ಏಕೆಂದರೆ ಇದು ಒಂದು ವಿಶಿಷ್ಟವಾದಂಥ ಭಾಗದಲ್ಲಿ ಪಲ್ಸಸ್ ಬೆಳೆಯತಕ್ಕಂಥದ್ದು. ಬೇರೆ ಕಡೆ ಇಷ್ಟೊಂದು ಪ್ರಮಾಣದಲ್ಲಿ ಬೆಳೆಯತಕ್ಕಂಥದ್ದು ಇಲ್ಲ. ಆದ್ದರಿಂದ ದಯವಿಟ್ಟು ಸರ್ಕಾರದವರು ಮಾರ್ಕೆಟ್‌ನಲ್ಲಿ ನೇರವಾಗಿ ಎಂಟರ್ ಆಗಿ ಕನಿಷ್ಟಪಕ್ಷ ಎಷ್ಟು ಬೆಳೆಯುತ್ತಾರೋ ಅದಕ್ಕೆ ಸಾಧ್ಯವಾದಷ್ಟು ಮಟ್ಟಿಗೆ ಒಂದು ಕಾಸ್ಟ್ ಪ್ರೈಸ್ ಆದರೂ ಬರುವಂಥ ರೀತಿಯಲ್ಲಿ ತಾವು ಮಾಡಬೇಕು ಎನ್ನತಕ್ಕಂಥದ್ದನ್ನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ಮತ್ತು ಇದಕ್ಕೆ ಏನೇನು ಪ್ರಯತ್ನ ಬೇಕು ಅದನ್ನೆಲ್ಲವನ್ನೂ ತಾವು ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಅಪೇಕ್ಷೆ ಪಡುತ್ತೇನೆ. ಮುಖ್ಯ-ಮಂತ್ರಿಗಳು ಇಲ್ಲೇ ಇದ್ದಾರೆ, ಸಂಬಂಧಪಟ್ಟ ಮಂತ್ರಿಗಳು ಇಲ್ಲೇ ಇದ್ದಾರೆ, ಮತ್ತೆ ಅದರ ಜೊತೆಯಲ್ಲಿ ಒಂದು ತೊಗರಿ ಬೇಳೆ ಅಭಿವೃದ್ಧಿ ಮಂಡಲಿ ಮಾಡಬೇಕು ಎನ್ನತಕ್ಕ ಒಂದು ಬೇಡಿಕೆ ಕೂಡ ಎಚ್. ಕೆ. ಡಿ. ಬಿ. ಒಂದು ಮೀಟಿಂಗ್‌ನಲ್ಲಿ ಕೂಡ ಈ ಒಂದು ಪ್ರಸ್ತಾವನೆ ಬಂದಿತ್ತು. ಏಕೆಂದರೆ, ಯಾವ ರೀತಿಯಾಗಿ ಕಾಟನ್‌ಗೆ ಮತ್ತು ನೀವು ಬೇರೆ ಬೇರೆ ಪದಾರ್ಥಗಳಿಗೆ ಹಾಪ್‌ಕಾಮ್ಸ್ ಇದೆಲ್ಲವನ್ನು ಮಾಡಿ ರೈತರಿಗೆ ಏನು ಅನುಕೂಲ ಮಾಡಿ ಕೊಟ್ಟಿದ್ದೀರಿ ಅದೇ ರೀತಿಯಾಗಿ ತೊಗರಿ ಬೆಳೆಯುವವರಿಗೂ ಕೂಡ ಈ ಒಂದು ಅನುಕೂಲ ಮಾಡಿ ಕೊಡುವಂತಹ ಅವಶ್ಯಕತೆ ಇದೆ. ಅದಕ್ಕಾಗಿ ಈ ಒಂದು ತೂರ್‌ದಾಲ್ ಡೆವಲಪ್ಮೆಂಟ್ ಬೋರ್ಡಿನ ಬಗ್ಗೆಯೂ ಕೂಡ ತಾವು ಯೋಜನೆ ಮಾಡಬೇಕು. ಈ ಒಂದು ಪರಿಸ್ಥಿತಿ ಉದ್ಭವ ಆದಾಗ ಅವರು ಮಾರ್ಕೆಟ್‌ನಲ್ಲಿ ಬಂದು ಖರೀದಿ ಮಾಡುವುದಕ್ಕೆ ಕೂಡ ಅನುಕೂಲ ಆಗುತ್ತದೆ, ಮತ್ತು ಸಾಮಾನ್ಯರಾಗಿ ಕನ್‌ಸ್ಯೂಮರ್ಸ್‌ಗೆ ಕೂಡ ಒಂದು ರೀಸನಬಲ್ ಪ್ರೈಸ್‌ನಲ್ಲಿ ಬಿಡುಗಡೆ ಮಾಡತಕ್ಕಂತಹ ಸಾಧ್ಯತೆ ಇದೆ. ಇವತ್ತು ತೊಗರಿ ಬೇಳೆಗೆ ಹೊರಗಡೆ ಪ್ರೈಸ್ ಇರತಕ್ಕಂಥದ್ದು ಕಡಿಮೆ ಆದರೆ ಪ್ರತಿ ಕೆ. ಜಿ. ಗೆ ತೊಗರಿಬೇಳೆ 1,500-1550 ಮ್ಯಾಗ್‌ಸಿಮಮ್, ಮಿನಿಮಂ 1,350 ಇದೆ ಹಿಗಿರುವಾಗ ಮಧ್ಯವರ್ತಿಗಳು ಎರಡು ಸಾವಿರದವರೆಗೆ ಹೇಗೆ ಪ್ರಾಫಿಟ್ ತೆಗೆದುಕೊಳ್ಳುತ್ತಾರೆ ಎನ್ನತಕ್ಕಂಥದ್ದು ಇದರಿಂದ ಸಹಜವಾಗಿ ಗೊತ್ತಾಗುತ್ತದೆ. ಅದಕ್ಕಾಗಿ ಇಂಥದ್ದೆಲ್ಲವೂ ಕೂಡ ಕಮಿಷನ್ ಏಜೆಂಟರಿಗೆ, ಶ್ರೀಮಂತರಿಗೆ ಲಾಭ ಹೋಗುವುದಕ್ಕಿಂತಲೂ ಮಾರ್ಕೆಟಿಂಗ್

ಫೆಡರೇಷನ್ ಆಗಲೀ ಅಥವಾ ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾದವರು ಇದರಲ್ಲಿ ಭಾಗಿಗಳಾಗಿ ರೈತರಿಗೆ ತಾವು ಸಹಾಯ ಮಾಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಈಗ ಶ್ರೀರಾಮರೆಡ್ಡಿಯವರು. ಅವರೂ ಕೂಡ ಇದೇ ವಿಚಾರದ ಬಗ್ಗೆ ನೋಟೀಸ್ ಕೊಟ್ಟಿದ್ದರು.

+ಶ್ರೀ ಜೆ. ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ನಾನು ಏನು ಹೇಳುತ್ತೇನೆ ಎಂದರೆ, ಮುಖ್ಯವಾಗಿ ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರುಗಳು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಸುಮಾರು 20 ಲಕ್ಷ ಕ್ವಿಂಟಾಲ್ ತೊಗರಿಬೇಳೆ ಉತ್ಪಾದನೆ ಆಗುತ್ತಾ ಇದೆ. ನಾನು ಒಂದು ಉದಾಹರಣೆ ಸರ್ಕಾರದ ಗಮನಕ್ಕೆ ತರುತ್ತೇನೆ. ಒಂದು ಎಕರೆಯಲ್ಲಿ ಅವರು ತೊಗರಿಬೇಳೆಯನ್ನು ಉತ್ಪಾದನೆ ಮಾಡಬೇಕಾದರೆ ಬೀಜ, ಗೊಬ್ಬರ, ಕ್ರಿಮಿನಾಶಕ, ಕಟಾವು ಇದೆಲ್ಲರೂ ಸೇರಿ ಒಂದು ಎಕರೆಗೆ 4,500 ರೂಪಾಯಿಗಳನ್ನೂ ಖರ್ಚು ಮಾಡಬೇಕಾಗುತ್ತದೆ. ಅಂದರೆ ಆ ಲೆಕ್ಕದಲ್ಲಿ ಒಂದು ಕ್ವಿಂಟಾಲ್‌ಗೆ 1,500 ರೂಪಾಯಿಗಳು ಖರ್ಚಾಗುತ್ತದೆ. ಆದರೆ ಇವತ್ತು ಬೆಲೆ ಇರತಕ್ಕಂಥದ್ದು 1,350ರಿಂದ 1,425 ರೂಪಾಯಿಗಳು ಅಷ್ಟೇ; ಬೆಲೆ ಮಾತ್ರ ಇದೆ. ಹಾಗಾಗಿ ರೈತರಿಗೆ ಇದರಲ್ಲಿ ತುಂಬಾ ನಷ್ಟ ಆಗುವಂತಹ ಪರಿಸ್ಥಿತಿ ಇದೆ ಮತ್ತು ಅವರು ಹಾಕಿದಂಥ ಬಂಡವಾಳ ಕೂಡ ಅದರಲ್ಲಿ ಬರಲಿಕ್ಕೆ ಸಾಧ್ಯವಿಲ್ಲದೇ ಇರತಕ್ಕ ಪರಿಸ್ಥಿತಿ ಇದೆ. ಮತ್ತು ರೈತರು ನಷ್ಟ ಅನುಭವಿಸುತ್ತಾ ಇದ್ದಾರೆ. ಇದರಲ್ಲಿ ನನ್ನ ಒಂದು ಅಭಿಪ್ರಾಯ ಏನೆಂದರೆ, ಮಾರುಕಟ್ಟೆಯಲ್ಲಿ ಸರ್ಕಾರವೇ ಮಧ್ಯ ಪ್ರವೇಶಿಸಿ ಕೊಂಡುಕೊಳ್ಳಬೇಕು ಎನ್ನತಕ್ಕಂಥದ್ದು ಒಂದು ಅಭಿಪ್ರಾಯ ಇದೆ; ಈಗಾಗಲೆ ಇದರ ಬಗ್ಗೆ ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ಕೂಡ ತಂದಿದ್ದೇವೆ. ಆದರೆ ಮಂತ್ರಿಗಳು 20 ಲಕ್ಷ ಹತ್ತಿರ ಹತ್ತಿರ ಕ್ವಿಂಟಾಲ್ ಆಗುವಂತಹ ಸಂದರ್ಭದಲ್ಲಿ 1 ಲಕ್ಷ, ಅಥವಾ 10,000 ಕ್ವಿಂಟಾಲ್ ತೆಗೆದುಕೊಳ್ಳಬಹುದು ಎಂದು ತಮ್ಮ ಅಭಿಪ್ರಾಯ ಹೇಳಿದ್ದಾರೆ. ಆದರೆ ಅದು ಏನೇನೂ ಪರಿಹಾರ ಕೊಟ್ಟಂತಾಗುವುದಿಲ್ಲ.

12.30 ಪಿ. ಎಂ

ಕರ್ನಾಟಕ ರಾಜ್ಯದಲ್ಲಿ ಉತ್ಪಾದನೆಯಾಗುತ್ತಿದ್ದ ತೊಗರಿ ಬೇಳೆಯಲ್ಲಿ ಕನಿಷ್ಠ ಅರ್ಧದಷ್ಟಾದರೂ ಸರ್ಕಾರ ತನ್ನ ವಿವಿಧ ಏಜೆನ್ಸಿಗಳ ಮೂಲಕ ಕೊಂಡುಕೊಳ್ಳುವಂಥ ತೀರ್ಮಾನ ಮಾಡಿದರೆ ರೈತರು ಬದುಕಲು ಸಾಧ್ಯವಾಗುತ್ತದೆ. ಇಲ್ಲದೇ ಹೋದರೆ ಬಹಳ ತೊಂದರೆಯಾಗುತ್ತದೆ. ಇನ್ನು ತೊಗರಿ ಬೆಳೆಗಾರರ ಬೋರ್ಡನ್ನು ತಾವು ರಚನೆ ಮಾಡಿ ಅವರಿಗೆ ಎಲ್ಲಾ ರೀತಿಯ ರಕ್ಷಣೆಯನ್ನು ಕೊಡಬೇಕು. ಏಕೆಂದರೆ ಇವೊತ್ತು ಕಾಫಿ ಬೋರ್ಡ್ ಇದೆ, ಬೇರೆ ಬೇರೆ ಬೋರ್ಡ್‌ಗಳು ರಚನೆಯಾಗಿವೆ. ಅದರಿಂದ ಆಯಾ ಬೆಳೆಗಾರರಿಗೆ ರಕ್ಷಣೆ ದೊರೆಯುತ್ತದೆ. ಆದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ತೊಗರಿ ಬೆಳೆಯತಕ್ಕಂಥ ಬೆಳೆಗಾರರಿಗೆ ಮತ್ತು ಹತ್ತಿ ಬೆಳೆಯತಕ್ಕಂಥ ಬೆಳೆಗಾರರಿಗೆ ಬೋರ್ಡ್ ಇಲ್ಲ, ಅವರಿಗೆ ರಕ್ಷಣೆ ಇಲ್ಲದೇ ಇರತಕ್ಕಂಥ ಪರಿಸ್ಥಿತಿಯಲ್ಲಿ ಆದಕಾರಣ ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿ ಸರ್ಕಾರವೇ ಕೊಂಡುಕೊಳ್ಳತಕ್ಕ ವ್ಯವಸ್ಥೆ ಮಾಡಬೇಕು, ಮತ್ತು ತೊಗರಿ ಬೇಳೆಯ ಬೋರ್ಡ್‌ನ್ನು ಮಾಡಬೇಕು. ಅದರಿಂದ ಅವರಿಗೆ

ಶಾಶ್ವತ ಪರಿಹಾರ ದೊರೆಯುತ್ತದೆ. ಆದ್ದರಿಂದ ಸರ್ಕಾರ ಇದರ ಬಗ್ಗೆ ತೀವ್ರ ಗಮನಹರಿಸಿ ಕಕ್ಷಣ ತೀರ್ಮಾನ ತೆಗೆದುಕೊಳ್ಳಬೇಕೆಂದು ನಾನು ನನ್ನ ಅಭಿಪ್ರಾಯವನ್ನು ಹೇಳುತ್ತೇನೆ.

ಶ್ರೀ ವೈಜನಾಥ್ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಸಿಪಿಎಂ ಶಾಸಕರು ಇದರ ಬಗ್ಗೆ ಹೇಳಿದ್ದಾರೆ. ಇಂದು ತೊಗರಿ ಬೆಳೆ ಬೆಳೆಯುವುದರಲ್ಲಿ ಗುಲ್‌ಬರ್ಗಾ ಜಿಲ್ಲೆ ಇಡೀ ಹಿಂದುಸ್ಥಾನದಲ್ಲಿ ಎರಡನೇ ಸ್ಥಾನದಲ್ಲಿ ಇದೆ. ಆದರೆ ಇವೊತ್ತು ಎಕ್ಸಪ್ಲಾಯಟೇಶನ್ ಹೆಚ್ಚು ಆಗುತ್ತಿದೆ. ಒಂದು ಎಕರೆಗೆ ಫೆಸ್ಟಿಸೈಡ್ಸ್, ಕ್ರಿಮಿನಾಶಕ ಹಚ್ಚಬೇಕಾದರೆ ಒಂದು ಎಕರೆಗೆ ಒಂದು ಸಲಕ್ಕೆ 500 ರೂಪಾಯಿ ಖರ್ಚಾಗುತ್ತದೆ. ಮೂರು ನಾಲ್ಕು ಸಾರಿ ಕ್ರಿಮಿನಾಶಕ ಹೊಡೆದರೆ ಎರಡು ಸಾವಿರ ರೂಪಾಯಿ ಖರ್ಚಾಗುತ್ತದೆ. ಈ ತರಹ ಬೇರೆ ಬೇರೆ ಖರ್ಚುಗಳೆಲ್ಲಾ ಸೇರಿ ಮೂರು ಸಾವಿರ ರೂಪಾಯಿ ಒಂದು ಎಕರೆಗೆ ಖರ್ಚಾಗುತ್ತದೆ. ಹಾರ್ವೆಸ್ಟಿಂಗ್ ಸೀಜನ್ ಇದ್ದಾಗ ಅದರ ಕಿಮ್ಮತ್ತು ವಿಪರೀತ ಕಡಿಮೆಯಾಗುತ್ತದೆ. ಆದರೆ ಕೆಲವೇ ತಿಂಗಳಲ್ಲಿ ಅದರ ಬೆಲೆ ಸುಮಾರು ಮೂರು ನಾಲ್ಕು ಪಟ್ಟು ಏರುತ್ತದೆ. ಗುಲ್‌ಬರ್ಗಾ ಜಿಲ್ಲೆಯವರಿಗೆ ಮುಖ್ಯವಾದ ಕ್ಯಾಷ್ ಕ್ರಾಪ್ ಎಂದರೆ ತೊಗರಿ. ಆದರೆ ಅವರ ಶೋಷಣೆಯನ್ನು ತಪ್ಪಿಸಲು ಒಂದು ತೊಗರಿ ಬೇಳೆ ಬೋರ್ಡ್ ಮಾಡಬೇಕು, ಮತ್ತೊಂದು ಮಾಡಬೇಕು ಎಂಬ ಅನೇಕ ಬೇಡಿಕೆಗಳು ಆ ಭಾಗದ ರೈತರದು ಇದೆ. ಅಷ್ಟೇ ಅಲ್ಲ, ಹತ್ತಿ ಬೆಳೆಗಾರರು ಕೂಡ ಈ ವರ್ಷ ಅಂಥದ್ದೇ ಒಂದು ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಅದರ ಬಗ್ಗೆ ರಾಯಚೂರಿನಿಂದ ಕೆಲವು ರೈತ ನಾಯಕರು ಬಂದು ಹೇಳಿದ್ದಾರೆ. ಹತ್ತಿ ಬೆಳೆಯುವುದಕ್ಕೂ ಕೂಡ ಅವರಿಗೆ ಕ್ರಿಮಿನಾಶಕ, ಅದರ ಬೀಜ, ಫರ್ಟಿಲೈಜರ್ ತುಂಬಾ ದುಬಾರಿ ಆಗುತ್ತಿವೆ, ಖರ್ಚು ಹೆಚ್ಚಾಗುತ್ತದೆ. ಅದರಲ್ಲೂ ಕೂಡ ವ್ಯಾಪಾರಿಗಳು, ಮಧ್ಯವರ್ತಿಗಳು ಶೋಷಣೆ ಮಾಡುತ್ತಾರೆ. ಆ ದೃಷ್ಟಿಯಿಂದ ಕಾಟನ್ ಕಾರ್ಪೊರೇಶನ್ ಆಫ್ ಇಂಡಿಯಾದವರು ಹತ್ತಿ ಖರೀದಿ ಮಾಡಬೇಕು, ಇದರಿಂದ ಅವರ ಶೋಷಣೆ ತಪ್ಪುತ್ತದೆ ಎಂದು ಇದೆ. ಆದರೆ ದುರ್ದೈವ ಎಂದರೆ ಸಿ. ಸಿ. ಐ. ರವರು ಹೋಗಿ ಸರಿಯಾಗಿ ಕಾಂಪಿಟೆಶನ್ ಮಾಡುವುದಿಲ್ಲ. ಆದಕಾರಣ ಅವರದೂ ಕೂಡ ರಾಯಚೂರಿನಲ್ಲಿ ಬಹಳ ಶೋಷಣೆಯಾಗುತ್ತಿದೆ. ಆದರೆ ಮಹಾರಾಷ್ಟ್ರದಲ್ಲಿ ಹತ್ತಿ ಬೆಳೆಗಾರರ ಸಲುವಾಗಿ ಒಂದು ವ್ಯವಸ್ಥೆ ಇದೆ. ಅದೇನೆಂದರೆ ಪೊನಾಪಲಿ ಪರ್ಚೇಸ್. ಅಲ್ಲಿ ಸರ್ಕಾರದವರೇ ಸಂಪೂರ್ಣ ಹತ್ತಿ ಖರೀದಿ ಮಾಡುತ್ತಾರೆ. ಅಲ್ಲಿ ಪ್ರೈವೇಟ್‌ನವರು ಯಾರೂ ಖರೀದಿ ಮಾಡುವುದಿಲ್ಲ. ಸರ್ಕಾರದವರು ಖರೀದಿ ಮಾಡಿ ಸ್ಟಾಕ್ ಇಟ್ಟು ನಂತರ ಮಿಲ್ ಮಾಲೀಕರೊಂದಿಗೆ ಬಾರ್ಗೈನ್ ಮಾಡಿ, ಹೆಚ್ಚಿನ ಕಿಮ್ಮತ್ತಿಗೆ ತೆಗೆದುಕೊಂಡು ರೈತರಿಗೆ ಲಾಭ ಮಾಡುವ ಪ್ರಯತ್ನ ಮಹಾರಾಷ್ಟ್ರದಲ್ಲಿ ನಡೆಯುತ್ತಿದೆ. ಅಂತಹ ಒಂದು ವ್ಯವಸ್ಥೆ ಕರ್ನಾಟಕದಲ್ಲೂ ಕೂಡ ಆಗಬೇಕು. ಇಲ್ಲೂ ಕೂಡ ಮೊನೊಪಲಿ ಪರ್ಚೇಸ್ ಆಗಬೇಕು. ಇನ್ನು ತೊಗರಿ ಬೇಳೆಯದು ಏನಿದೆ ಅದು ಬೋರ್ಡ್ ಮುಖಾಂತರವಾಗಲಿ ಫುಡ್ ಕಾರ್ಪೊರೇಶನ್‌ನವರ ಮುಖಾಂತರವಾಗಲಿ ಅಥವಾ ಎಪಿಎಂಸಿ ಮುಖಾಂತರವಾಗಲಿ ಪರ್ಚೇಸ್ ಮಾಡಬೇಕು. ಸರ್ಕಾರದವರು ಅವರಿಗೆ ಹೆಚ್ಚಿನ ಹಣ ಕೊಟ್ಟು ಪರ್ಚೇಸ್ ಮಾಡಬೇಕು ಮತ್ತು ಮಾರ್ಕೆಟ್ಟಿನಲ್ಲಿ ಕಿಮ್ಮತ್ತು ಬಂದಾಗ ಮಾರಾಟ ಮಾಡಬೇಕು ಎಂದು ನಿರ್ದೇಶನ ನೀಡಬೇಕು. ಅಲ್ಲಿ ಈಗ ತೊಗರಿಬೇಳೆ ಬೆಲೆ 1300-1400 ಪರ್ ಕ್ವಿಂಟಲ್ ಇದ್ದರೆ ಬೆಂಗಳೂರಿನಲ್ಲಿ ಅದರ ಬೆಲೆ 40

ರೂಪಾಯಿ ಪರ್ ಕೆ. ಜಿ. ಇದೆ. ಅಂದರೆ 40 ಸಾವಿರ ಪರ್ ಕ್ವಿಂಟಲ್ ಇದೆ. ಎಷ್ಟೊಂದು ವ್ಯತ್ಯಾಸ ಇದೆ. ಆ ದೃಷ್ಟಿಯಿಂದ ಸರ್ಕಾರದವರು ಈ ಕಡೆ ಗಮನಹರಿಸಿ ತೊಗರಿ ಬೆಳೆಗಾರರ ಮತ್ತು ಹತ್ತಿ ಬೆಳೆಗಾರರ ಏನು ಶೋಷಣೆಯಾಗುತ್ತಿದೆ ಆ ಶೋಷಣೆಯನ್ನು ತಪ್ಪಿಸಲು ಸರ್ಕಾರ ಮುಂದೆ ಬರಬೇಕು. ಮೊನಾಪಲಿ ಪರ್ಚೇಸ್ ಮಾಡಬೇಕು. ಮಧ್ಯವರ್ತಿಗಳ ಏನು ಕೈವಾಡ ಇದೆ ಅದನ್ನು ನಿಲ್ಲಿಸಬೇಕು, ಎಂದು ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಭೈರೇಗೌಡ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ತೊಗರಿ ಬೆಳೆಯನ್ನು 96-97ನೇ ಸಾಲಿನಲ್ಲಿ ಸುಮಾರು 4.62 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ. ತೊಗರಿ ಬೆಳೆಯು ರಾಜ್ಯದ ಉತ್ತರ ಭಾಗದ ಗುಲ್ಬರ್ಗಾ, ಬೀದರ್, ರಾಯಚೂರು ಮತ್ತು ಬಿಜಾಪುರ ಜಿಲ್ಲೆಗಳ ಪ್ರಮುಖ ಬೇಳೆಕಾಳು ಬೆಳೆಯಾಗಿರುತ್ತದೆ.

ರಾಜ್ಯದಲ್ಲಿ ಬೆಳೆಯುವ ಒಟ್ಟು ತೊಗರಿ ಬೆಳೆಯ ವಿಸ್ತೀರ್ಣದ ಸುಮಾರು ಶೇ. 50 ರಷ್ಟು ಗುಲ್ಬರ್ಗ ಜಿಲ್ಲೆ ಒಂದರಲ್ಲಿಯೇ ಬೆಳೆಯಲಾಗುತ್ತಿದೆ. ಗುಲ್ಬರ್ಗ ಜಿಲ್ಲೆಯಲ್ಲಿ ಸುಮಾರು 2.21 ಲಕ್ಷ ಹೆಕ್ಟೇರ್ 1996-97ರ ಮುಂಗಾರಿನಲ್ಲಿ ಬೆಳೆಯಲಾಗಿದ್ದು ಕಳೆದ ಸಾಲಿನಲ್ಲಿ ಗುಲ್ಬರ್ಗ ಜಿಲ್ಲೆಯಲ್ಲಿ 2.27 ಲಕ್ಷ ಹೆಕ್ಟೇರ್ ಮತ್ತು ರಾಜ್ಯದಲ್ಲಿ 4.27 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗಿತ್ತು. ಆದರೆ 1994-95ನೇ ಸಾಲಿನಲ್ಲಿ ತೊಗರಿಯನ್ನು ಸುಮಾರು 1.21 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ಗುಲ್ಬರ್ಗ ಜಿಲ್ಲೆಯಲ್ಲಿ ಬೆಳೆಯಲಾಗಿತ್ತು. ಇದರಿಂದಾಗಿ ರಾಜ್ಯ ಒಟ್ಟು ತೊಗರಿ ವಿಸ್ತೀರ್ಣ 3.05 ಲಕ್ಷ ಹೆಕ್ಟೇರ್ ಆಗಿದ್ದಿತು. 1995-96 ಹಾಗೂ 96-97ನೇ ಸಾಲಿನಲ್ಲಿ ಬಿದ್ದ ಸಕಾಲಿಕ ಮಳೆಯಿಂದಾಗಿ ಉತ್ತಮ ಬೆಳೆಯನ್ನು ನಿರೀಕ್ಷಿಸಿ ಹೆಚ್ಚಿನ ರೈತರು ತೊಗರಿ ಬೆಳೆಯನ್ನು ಬೆಳೆಯಲು ಉತ್ತೇಜಿತಗೊಂಡರು. 1995-96ನೇ ಸಾಲಿನಲ್ಲಿ ಉತ್ತಮ ಮಳೆ ಹಂಚಿಕೆಯಿಂದ ಉತ್ಪಾದನೆಯು ಗಣನೀಯವಾಗಿ ಹೆಚ್ಚಿ, ಸುಮಾರು 1.99 ಲಕ್ಷ ಟನ್ ಉತ್ಪಾದನೆಯಾಗಬಹುದೆಂದು ತಾತ್ಕಾಲಿಕವಾಗಿ ಅಂದಾಜು ಮಾಡಲಾಗಿದೆ.

1996-97ನೇ ಸಾಲಿನಲ್ಲಿ ತೊಗರಿ ಉತ್ಪಾದನೆಯು ಗಣನೀಯ ಪ್ರಮಾಣದಲ್ಲಿ ಹೆಚ್ಚಾಗಿರುವುದರಿಂದ ಮಾರುಕಟ್ಟೆಯಲ್ಲಿ ತೊಗರಿಯ ಬೆಲೆಯು ಕುಸಿಯಬಹುದು ಎಂದು ರೈತರು ಕಳವಳ ಪಟ್ಟಿರುತ್ತಾರೆ. ರಾಜ್ಯದ ಅತ್ಯಂತ ದೊಡ್ಡ ತೊಗರಿ ಮಾರುಕಟ್ಟೆಯಾದ ಗುಲ್ಬರ್ಗ ಮಾರುಕಟ್ಟೆಯಲ್ಲಿ 1996ರ ಜನವರಿ ಮಾಹೆಯಲ್ಲಿ ತೊಗರಿ ಮಾದರಿ ಮಾರಾಟ ಬೆಲೆಯು ಪ್ರತಿ ಕ್ವಿಂಟಾಲಿಗೆ ರೂ. 1825-00 ಗಳಾಗಿತ್ತು. ಆದರೆ 1997ನೇ ಜನರರಿ ಮಾಹೆಯಲ್ಲಿ ಇದೇ ಗುಲ್ಬರ್ಗ ಮಾರುಕಟ್ಟೆಯಲ್ಲಿ ಪ್ರತಿ ಕ್ವಿಂಟಾಲ್‌ಗೆ ತೊಗರಿ ಬೆಲೆಯು 1550-00 ರೂ. ಗಳಾಗಿರುತ್ತದೆ. ಮುಂಬರುವ ದಿನಗಳಲ್ಲಿ ತೊಗರಿ ಬೆಲೆಯು ಮತ್ತೆ ಕುಸಿದು ರೈತರಿಗೆ ತೊಂದರೆ ಆಗಬಾರದು ಎಂಬ ದೃಷ್ಟಿಯಿಂದ ಸರ್ಕಾರವು ಕರ್ನಾಟಕ ಕೃಷಿ ಕೈಗಾರಿಕಾ ನಿಗಮ, ಕರ್ನಾಟಕ ಮಾರುಕಟ್ಟೆ ಮಹಾ ಮಂಡಳಿ, ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ಮತ್ತು ಕರ್ನಾಟಕ ಎಣ್ಣೆಕಾಳು ಮಂಡಳಿ ಸಂಸ್ಥೆಗಳೊಡನೆ ವಿಚಾರ ವಿನಿಮಯ ನಡೆಸಿ ಇವರುಗಳು ಸತತವಾಗಿ ಮಾರುಕಟ್ಟೆ ಪ್ರವೇಶಿಸುವ ಮೂಲಕ ತೊಗರಿ ಉತ್ಪನ್ನವನ್ನು ಪ್ರತಿ ಕ್ವಿಂಟಾಲ್‌ಗೆ 1500 ರೂ. ಗಳಂತೆ ಖರೀದಿಸುವಂತೆ ಮಾಡಲಾಗಿದೆ. ಇದರಿಂದಾಗಿ ರೈತರ ಉತ್ಪನ್ನಕ್ಕೆ ಸರಿಯಾದ ಬೆಲೆಯನ್ನು ನೀಡದಂತಾಗುತ್ತದೆಂದು ಭಾವಿಸಲಾಗಿದೆ.

ಈ ವಿಚಾರದಲ್ಲಿ ಮತ್ತೊಂದು ಅಂಶವನ್ನು ಈ ಸಭೆಯ ಗಮನಕ್ಕೆ ತರತಕ್ಕಂಥದ್ದು ಏನೆಂದರೆ, ಈಗ ನಾವು ಆ ಸಂಸ್ಥೆಗಳಿಗೆ ವ್ಯಾಪಾರ ಮಾಡಿ ಎಂದು ಹೇಳಿದ್ದೇವೆ. ಆದರೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಜಂಟಿ ಕಾರ್ಯಕ್ರಮದಂತೆ ಒಂದು ಮಿನಿಮಮ್ ಸಪೋರ್ಟ್ ಪ್ರೈಸ್ ಎನ್ನತಕ್ಕಂಥದ್ದು ಇದೆ. ತೊಗರಿಗೆ ಅದು ಕೇವಲ 840 ರೂಪಾಯಿ ಮಾತ್ರ ಇದೆ. ಈ ಯೋಜನೆಯಲ್ಲಿ ನಾವು ಕಾರ್ಯಗತ ಮಾಡಬೇಕಾದರೆ ಅಲ್ಲಿ ಆಗತಕ್ಕಂಥ ನಷ್ಟವನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳಿಗೆ ಶೇಕಡ 50-50ರಷ್ಟು ನಾವು ಹಂಚಿಕೆ ಮಾಡಬೇಕಾಗುತ್ತದೆ. ಈ 840 ರೂಪಾಯಿ ಯಾವ ಕಾರಣದಿಂದ ನಿಗದಿ ಪಡಿಸಿದ್ದಾರೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಯಾವ ಏಕೆಂದರೆ ಇದು ರಾಷ್ಟ್ರವ್ಯಾಪ್ತಿ. ತೊಗರಿ ಬೇಳೆಯನ್ನು ಬರೀ ಕರ್ನಾಟಕದಲ್ಲಿ ಬೆಳೆಯುತ್ತಿಲ್ಲ, ಬೇರೆ ಬೇರೆ ರಾಜ್ಯಗಳಲ್ಲಿಯೂ ಸಹ ಬೆಳೆಯುತ್ತಿದ್ದಾರೆ. ಇಡೀ ರಾಷ್ಟ್ರಕ್ಕೆ ಅನ್ವಯವಾಗುವಂತಹ ದರವನ್ನು ನಿಗದಿಪಡಿಸಿದ್ದಾರೆ. ನಾವು ತೊಗರಿಯನ್ನು ಮಾರ್ಕೆಟ್ ಇಂಟರ್‌ವೆಶನ್ ಸ್ಕೀಮಿನಲ್ಲಿ ಖರೀದಿ ಮಾಡುತ್ತೇವೆ ಎಂದರೆ ನಾನೂ ಒಬ್ಬ ಬೆಳೆಗಾರನಾಗಿ ಒಪ್ಪುವುದಕ್ಕೆ ಸಾಧ್ಯವಿಲ್ಲ ಹಾಗೂ ಸಾಧು ಕೂಡ ಅಲ್ಲ. ಅದು ಆಗತಕ್ಕಂಥ ಕೆಲಸ ಕೂಡ ಅಪಹಾಸ್ಯಕ್ಕೆ ಗುರಿ ಆದ ಹಾಗೆ ಆಗುತ್ತದೆ. ನಾನು ಅದರ ನೆರವನ್ನು ಇವೊತ್ತಿನ ದಿವಸ ಪಡೆಯುತ್ತಿಲ್ಲ. ಆದರೆ ಇವೊತ್ತು ರೈತರಿಗೆ ನಷ್ಟವಾಗುತ್ತಿದೆ. ಅದನ್ನು ಏನಾದರೂ ಮಾಡಿ ಸರಿದೂಗಿಸಬೇಕು ಮತ್ತು ಮಧ್ಯವರ್ತಿಗಳ ಕೈಯಿಂದ ರೈತರಿಗೆ ರಕ್ಷಣೆ ನೀಡಬೇಕು ಎನ್ನುವ ಕಾರಣದಿಂದ ನಮ್ಮ ಸಂಸ್ಥೆಗಳಿಗೆ ತಿಳಿಸಿದ್ದೇವೆ. ನೀವು ವ್ಯಾಪಾರ ಮಾಡಿ ಎಂದು. ಕೆಲವು ಸಂಸ್ಥೆಗಳವರು ನಮಗೆ ವ್ಯಾಪಾರ ಮಾಡಲು ಹಣ ಬೇಕು ಎಂದು ಕೇಳಿದ್ದಾರೆ. ಅದನ್ನು ನಾನು ಈಗಾಗಲೇ ಸಚಿವ ಸಂಪುಟದ ಮುಂದೆ ತೆಗೆದುಕೊಂಡು ಹೋಗಲಿದ್ದೇನೆ. ಅದರ ಬಗ್ಗೆ ಟಿಪ್ಪಣಿ ಸಹ ತಯಾರು ಮಾಡಿ ಸಚಿವ ಸಂಪುಟಕ್ಕೆ ಕಳುಹಿಸುತ್ತಿದ್ದೇನೆ. ಅವರಿಗೆ ಹಣದ ಸೌಲಭ್ಯವನ್ನು ಆದಷ್ಟು ಬೇಗ ಕೊಟ್ಟು ರೈತರ ರಕ್ಷಣೆ ಮಾಡತಕ್ಕಂಥ ಪ್ರಯತ್ನ ಮಾಡುತ್ತಿದ್ದೇವೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಮೂಲಕ ಮಾನ್ಯ ಸದಸ್ಯರುಗಳ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷರೆ, ತೊಗರಿ ಮಂಡಳಿ ಬಗ್ಗೆ ಹೇಳುವುದನ್ನು ಮರೆತೆ, ನಮ್ಮಲ್ಲಿ ಕಾಫಿ ಮಂಡಳಿ ಇದೆ. ಕಾಫಿ ಮಂಡಳಿ ಅನುಭವ ಕಾಫಿ ಬೆಳೆಗಾರರಿಗೆ ಗೊತ್ತಿದೆ. ಅದರಿಂದ ಯಾವ ಪ್ರಯೋಜನವೂ ಕೂಡ ಆಗಿಲ್ಲ. ರೀಸರ್ಚ್ ಮಾತ್ರ ಮಾಡಿರಬಹುದು. ಕಾಫಿ ಮಂಡಳಿ ರಿಸರ್ಚ್ ಮಾಡಿದೆಯೇ ವಿನಃ ಮಾರ್ಕೆಟಿಂಗ್‌ನಲ್ಲಿ ಪ್ರಗತಿಯಾಗಿಲ್ಲ. ಮಾನ್ಯ ನಾಣಯ್ಯನವರಿಗೂ ಗೊತ್ತಿದೆ. ಕಾಫಿ ಮಂಡಳಿ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಕಾಫಿ ಬೆಳೆಗಾರರಿಗೆ ಸಾವಿರಾರು ಕೋಟಿ ನಷ್ಟವಾಗಿದೆ. ನಿಗದಿಯಾದ ಬೆಲೆಗೆ ಮಾತ್ರ ಕಾಫಿಯನ್ನು ಕೊಂಡುಕೊಳ್ಳುತತ್ತಾರೆ, ಆದರೆ ಇಲ್ಲಿ ಮಾರಾಟ ವ್ಯವಸ್ಥೆ ಸರಿಯಾಗಿಲ್ಲ. ಆ ಕಾರಣದಿಂದ ತೊಗರಿ ಮಂಡಳಿ ಮಾಡುವುದರಿಂದ ರೈತರಿಗೆ ಅನುಕೂಲವಾಗದಿರುವ ಪ್ರಯುಕ್ತ ಆ ಮಂಡಳಿಯನ್ನು ಮಾಡುವ ಯೋಚನೆ ಸರ್ಕಾರಕ್ಕಿಲ್ಲವಾದ್ದರಿಂದ ತೊಗರಿ ಮಂಡಳಿಯನ್ನು ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದು ಯಾವಾಗ ಅನುಕೂಲವಾಗುತ್ತದೆಂದರೆ ಬಂಪರ್ ಪ್ರೈಸ್ ಯಾವಾಗ ಬರುತ್ತದೆ ಆಗ ಸ್ಟೆಬಿಲೈಸ್ ಮಾಡುವುದಕ್ಕೆ ಸರ್ಕಾರದವರು ಮಧ್ಯ ಬರಬೇಕಾಗುತ್ತದೆ. ಇಲ್ಲದೇ ಹೋದರೆ ದೊಡ್ಡ ದೊಡ್ಡ ಶ್ರೀಮಂತರು ಖರೀದಿ ಮಾಡಿ

ಇಟ್ಟುಕೊಳ್ಳುತ್ತಾರೆ. ಸಾಮಾನ್ಯವಾಗಿ ರೈತರು ಉಗಾದಿ ವೇಳೆಗೆ, ಲಗ್ನ ಅಥವಾ ಮಹೂರ್ತ ಎಂದು ಬಂದಾಗ ಆಗ ಅವರಿಗೆ ಹಣದ ಅವಶ್ಯಕತೆ ಹೆಚ್ಚಿಗೆ ಇರುತ್ತದೆ. ಅದೂ ಅಲ್ಲದೇ ಇವರ ಹತ್ತಿರ ಸ್ಟೋರಿಂಗ್ ಕೆಪಾಸಿಟಿ ಕೂಡ ಇರುವುದಿಲ್ಲ. ಆ ಕಾರಣದಿಂದ ಆಗ ಅವರು ಏನು ಮಾಡುತ್ತಾರೆಂದರೆ ಆ ವೇಳೆಯಲ್ಲಿ ತಕ್ಷಣ ಯಾವ ಬೆಲೆ ಇದೆಯೋ ಅದೇ ಬೆಲೆಗೆ ಮಾರಾಟ ಮಾಡಿಬಿಡುತ್ತಾರೆ. ಅವರು ಹೋಗಿ ಅಡತಿಗೆ ಹಚ್ಚಿಬಿಡುತ್ತಾರೆ. ಅನೇಕ ಸಾರಿ ಈ ಗಂಜ್‌ನಲ್ಲಿ ಇರತಕ್ಕಂಥವರು, ಅಡತಿನಲ್ಲಿ ಇರತಕ್ಕಂಥ ಕಮಿಶನ್ ಏಜೆಂಟ್‌ಗಳು ಈ ರೈತರಿಗೆ ಏನು ಹೇಳುತ್ತಾರೆಂದರೆ ಮುಂದೆ ಇದಕ್ಕಿಂತ ಹೆಚ್ಚು ಬೆಲೆ ಬರುವುದಿಲ್ಲ ಮುಂದೆ ಬೇಕಾದರೆ ನೋಡೋಣ, ಈಗ ಬೆಲೆಯನ್ನು ಕೊಟ್ಟುಬಿಡಿ ಎಂದು ಹೇಳಿದ ಮೇಲೆ ಸುಮಾರು 100ಕ್ಕೆ 90 ಭಾಗ ರೈತರು ಕೊಟ್ಟುಬಿಡುತ್ತಾರೆ. ದೊಡ್ಡ ಜನರು ಶ್ರೀಮಂತರು ಮಾತ್ರ ಗೋಡೋನ್‌ನಲ್ಲಿ ಸ್ವಲ್ಪ ದಿವಸ ಇಟ್ಟು ಹೆಚ್ಚುಬೆಲೆ ಬಂದಾಗ ಮಾರುತ್ತಾರೆ. ಆದರೆ ಹೆಚ್ಚಿನವರು ಏನು ಬೆಲೆ ಸಿಗುತ್ತದೆಯೋ ಅದೇ ಬೆಲೆಗೆ ಮಾರಿಬಿಡುತ್ತಾರೆ. ಅದಕ್ಕೇ ನೀವು ಯಾವ ಏಜೆನ್ಸಿ ಮೂಲಕ ಖರೀದಿ ಮಾಡಬೇಕೆಂದು ಮಾಡಿದ್ದೀರಿ ಎಂಬುದನ್ನು ತಿಳಿಸಿ. ಮಾರ್ಕೆಟಿಂಗ್ ಫೆಡರೇಶನ್‌ನಿಂದ, ಫುಡ್ ಕಾರ್ಪೊರೇಶನ್‌ನಿಂದ ಮಾಡುತ್ತೀರೋ ಎಂಬುದನ್ನು ಹೇಳಿ. ಭಾರತ ಸರ್ಕಾರದ ದರ 850 ರೂಪಾಯಿ. ಆದರೆ ನೀವು ಫಿಕ್ಸ್ ಮಾಡಿರುವುದು 1550-00 ರೂಪಾಯಿಗಳು ಅದಕ್ಕೂ ದುಡ್ಡಿಲ್ಲ. ಸುಮ್ಮನೆ ಮಾರ್ಕೆಟಿಂಗ್ ಫೆಡರೇಶನ್‌ನಲ್ಲಿ ರೇಟ್ ಕೊಟ್ಟುಬಿಟ್ಟಿದ್ದಾರೆ. ನಮ್ಮ ಗುರುಪಾದಪ್ಪನವರಿಗೂ ಚೆನ್ನಾಗಿ ಗೊತ್ತು. ಈಗ ಕೋಲಾರದವರ್ಯಾರೋ ಅದಕ್ಕೆ ಅಧ್ಯಕ್ಷರಾಗಿರಬಹುದು. ಅದಕ್ಕೋಸ್ಕರ ನೀವು ತಕ್ಷಣ ಯಾರ ಮುಖಾಂತರ ಖರೀದಿ ಮಾಡುತ್ತೀರಿ ಮತ್ತು ಯಾವಾಗ ಮಾಡುತ್ತೀರಿ ಎನ್ನುವುದನ್ನು ಹೇಳಬೇಕು. ಏಜೆನ್ಸಿ ಇರುವುದರಿಂದ ಲಾಭ ಏನೆಂದರೆ ಹಿಂದೆ ಅವರೂ ಕೂಡ ಬೋರ್ಡ್ ಇದ್ದಾಗ ಯಾವಾಗ ಪ್ರೈಸ್ ಕಡಿಮೆ ಇರುತ್ತಿತ್ತೋ ಆಗ ಅವರೇ ಹೇಳುತ್ತಿದ್ದರು, ಆಗ ಎಲ್ಲರೂ ಕಾಫಿ ಬೋರ್ಡ್‌ಗೇ ಮಾರಲು ಹೋಗುತ್ತಿದ್ದರು. ಆದರೆ ಯಾವಾಗ ಲಿಬರಲೈಸೇಶನ್ ಆಯಿತು ಅಥವಾ ಕಾಫಿಗೆ ಹೊರಗಡೆ ಹೆಚ್ಚು ರೇಟ್ ಬರುತ್ತಿದೆ ಆ ಸಂದರ್ಭದಲ್ಲಿ ಅವರು ಹೇಳುತ್ತಿದ್ದಾರೆ, ಈಗ ನಮಗೇ ಬಿಟ್ಟು ಬಿಡಿ 50 ಪರ್ಸೆಂಟ್ ನಮಗೆ ಮತ್ತು 50 ಪರ್ಸೆಂಟ್ ನಿಮಗೆ ಎನ್ನುವಂಥ ವಿಚಾರ ಶುರುವಾಯಿತು. ರೇಟ್ ಹೆಚ್ಚು ಇದ್ದಾಗ ಹೀಗೆ ಮಾಡುತ್ತಾರೆ. ರೇಟ್ ಕಡಿಮೆ ಇದ್ದಾಗ ಅವರೂ ಕೂಡ ಕಾಫಿ ಬೋರ್ಡ್‌ಗೆ ಮೊರೆ ಹೋಗುತ್ತಾರೆ, ಮಾರ್ಟ್‌ಗೇಜ್ ಮಾಡುತ್ತಾರೆ. ಏಕೆಂದರೆ ಅವರೇ ಇವರಿಗೆ ಲೋನ್ ಕೊಡತಕ್ಕಂಥದ್ದು. ಆದರೆ ಇಲ್ಲಿ ಲೋನ್ ಕೊಡುವ ವ್ಯವಸ್ಥೆ ಇಲ್ಲ. ನಾಳೆ ಔಷಧಿ ಖರೀದಿ ಮಾಡಬೇಕು, ಪೌಡರ್ ಹೊಡೆಯಬೇಕು ಎಂದಾಗ ಬ್ಯಾಂಕ್‌ನವರು ಹಣ ಕೊಡುವುದಿಲ್ಲ. ಆದರೆ ಅಲ್ಲಿ ಅವರು ಬೋರ್ಡ್‌ನಿಂದ ಮತ್ತು ಬ್ಯಾಂಕ್‌ನಿಂದ ಸಾಲ ತೆಗೆದುಕೊಳ್ಳುತ್ತಾರೆ. ಆದುದರಿಂದ ದಯವಿಟ್ಟು ಇದರ ಬಗ್ಗೆ ತಾವು ಪುನರ್‌ಪರಿಶೀಲನೆ ಮಾಡಿ. ನಾನು ಹೇಳುತ್ತಿದ್ದೇನೆಂದು ಮಾಡಬೇಕೆಂದೇನೂ ಇಲ್ಲ. ನೀವು ಬೇಕಾದರೆ ನಿಮ್ಮ ಡೈರೆಕ್ಟರ್‌ನ್ನು ಕರೆದು ಮಾತನಾಡಿ, ರಿಸರ್ಚ್ ವಿಂಗರವರನ್ನು ಕರೆದು ಮಾತನಾಡಿ. ನಾನು ಆಗ ಬೋರ್ಡ್ ಆಫ್ ರಿಜಂಟ್ ಇದ್ದಾಗ ನಾನೇ ತೊಗರಿ ಪಲ್ಸ್‌ಸ್ ಡೆವಲಪ್‌ಮೆಂಟ್ ಬೋರ್ಡ್ ಮಾಡಬೇಕೆನ್ನುವ ದೃಷ್ಟಿಯಿಂದ ಪಲ್ಸ್ ರಿಸರ್ಚ್ ಸೆಂಟರ್‌ನ್ನು ಮಾಡಿದೆ. ಇದನ್ನು ಕೃಷಿ ವಿಶ್ವವಿದ್ಯಾಲಯದಿಂದ ತೊಗರಿಗೋಸ್ಕರ

ವಿಶೇಷವಾಗಿ ಅಂದು ಮಾಡಲಾಯಿತು. ಆದರೂ ಕೂಡ ಅಷ್ಟು ಉತ್ತಮವಾಗಿ ಕೆಲಸ ಆಗುತ್ತಿಲ್ಲ. ಅದಕ್ಕಾಗಿ ತಮ್ಮನ್ನು ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ, ತೊಗರಿಗೆ ಬೋರ್ಡಿನ ವ್ಯವಸ್ಥೆಯನ್ನು ಮಾಡಿದರೆ ಒಳ್ಳೆಯದು. ಈಗ ಮಾಡಿರುವ ಹಾಪ್‌ಕಾಮ್ ಚೆನ್ನಾಗಿ ನಡೆದಿದೆಯೋ ಇಲ್ಲವೋ. ಈಗ ಬಿಜಾಪುರದವರು ಅದನ್ನೇ ಕೇಳುತ್ತಿದ್ದಾರೆ. ಆ ರೀತಿಯಾಗಿ ತೊಗರಿ ಮಂಡಳಿ ಬಗ್ಗೆ ಯೋಚನೆ ಮಾಡಿ ಮಾಡತತಕ್ಕಂಥದ್ದ ಇಂದು ಅವಶ್ಯಕತೆ ಇದೆ.

ಶ್ರೀ ಜೆ. ಎ. ಶ್ರೀರಾಮರೆಡ್ಡಿ : ಅಧ್ಯಕ್ಷರೆ, ತೊಗರಿ ಮಂಡಳಿ ಬಗ್ಗೆ....

ಅಧ್ಯಕ್ಷರು : ಬೇಡ, ಈಗ ಚರ್ಚೆ ಬೇಡ. ಏಕೆಂದರೆ other subjects will get relegated to the background. The Hon'ble Minister will take note of these aspects and go in for discussion. Let us close this.

ಶ್ರೀ ಜೆ. ಎ. ಶ್ರೀರಾಮರೆಡ್ಡಿ : ಅಲ್ಲ, ಅವರು ಕಾಫಿ ಮಂಡಳಿ ಬಗ್ಗೆ ಅನುಭವ ಹೇಳುತ್ತಿದ್ದರು ಅದಕ್ಕೂ ಇದಕ್ಕೂ ವ್ಯತ್ಯಾಸ ಏನು ಎಂದು ಹೇಳೋಣ ಎಂದು ಎದ್ದೆ.

ಅಧ್ಯಕ್ಷರು : ಬೈರೇಗೌಡರಿಗೆ ಗೊತ್ತಿದೆ ಬಿಡಿ. ಅವರಿಗೆ ಗೊತ್ತಿಲ್ಲದೇ ಇರುವ ವಿಷಯ ಏನೂ ಅಲ್ಲ ಬಿಡಿ.

ಶ್ರೀ ಬಿ. ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೇ, ಕಾಫಿ ಮಂಡಳಿ ಬಗ್ಗೆ ಪ್ರಸ್ತಾಪವಾಗಿರುವುದರಿಂದ ನಾನು ಅದರ ಬಗ್ಗೆ ಒಂದೆರಡು ಮಾತುಗಳನ್ನಾಡಬಯಸುತ್ತೇನೆ. ಕಾಫಿ ಮಂಡಳಿಯಿಂದ ಕಾಫಿ ಬೆಳೆಗಾರರಿಗೆ ಏನೂ ಉಪಯೋಗವಾಗಲಿಲ್ಲ ಎಂದು ಮಂತ್ರಿಗಳು ಪ್ರಸ್ತಾಪ ಮಾಡಿದ್ದಾರೆ. ಅದು ತಪ್ಪು ಮಾಹಿತಿಯಾದುದರಿಂದ ಆ ವಿಷಯ ದಾಖಲೆಗೆ ಹೋಗಬಾರದು ಎನ್ನುವ ಉದ್ದೇಶದಿಂದ ನಾನು ಮಧ್ಯ ಮಾತನಾಡಬೇಕಾಯಿತು. ಕಾಫಿ ಮಂಡಳಿಯಿಂದ ರೈತರಿಗೆ ಸಾಕಷ್ಟು ಅನುಕೂಲವಾಗಿದೆ. ಕಾಫಿ ಮಂಡಳಿಯ ಸದಸ್ಯರುಗಳು ಎಲ್ಲಿಯವರೆಗೆ ಚುನಾಯಿತ ಸದಸ್ಯರುಗಳಿದ್ದಾರೋ ಅಲ್ಲಿಯವರೆಗೆ ಕಾಫಿ ಮಂಡಳಿಯಿಂದ ಉತ್ತಮ ಕೆಲಸಗಳು ನಡೆದು ಬೆಳೆಗಾರರಿಗೆ ತುಂಬಾ ಸಹಕಾರಿಯಾಗಿದೆ. ಯಾವಾಗ ಈ ಮಂಡಳಿಯ ಸದಸ್ಯರುಗಳು ನಾಮಿನೇಟೆಡ್ ಪದ್ಧತಿಯಿಂದ ಬಂದರೋ ಆಗಿನಿಂದ ಈ ಎಲ್ಲಾ ರೀತಿಯ ಗೊಂದಲಕ್ಕೆ ಕಾರಣವಾಯಿತೇ ವಿನಃ 1952ರ ಹಿಂದೆ ಏನು ಈಗಿನ ಕಾಫಿ ಬೋರ್ಡ್ ಪ್ರಾರಂಭವಾಗದಿದ್ದರೆ ಬಹುಶಃ ಕಾಫಿ ಬೆಳೆ ಇಂದಿನ ಮಟ್ಟಕ್ಕೆ ಬರುತ್ತಿರಲಿಲ್ಲ. ಪ್ರತಿಯೊಂದು ಭಾಗದಲ್ಲೂ ಕಾಫಿ ಬೆಳೆ ಇಂದಿನ ಮಟ್ಟಕ್ಕೆ ಬರಲು ಕಾರಣ ಈ ಕಾಫಿ ಮಂಡಳಿಯೇ ಎನ್ನುವುದನ್ನು ತಿಳಿದುಕೊಳ್ಳಬೇಕು. ಆದರೆ ಇತ್ತೀಚಿನ ಕಾಲದಲ್ಲಿ ಮಾರ್ಕೆಟಿಂಗ್ ಸೈಡ್‌ನಲ್ಲಿ ಸ್ವಲ್ಪ ವ್ಯತ್ಯಾಸವಾಯಿತು. ಒಂದು ಕಾಲದಲ್ಲಿ ಒಂದು ಟನ್ ಕಾಫಿಗೆ 8 ರಿಂದ 10 ಸಾವಿರ ರೂಪಾಯಿಗಳನ್ನು ಕೊಡುವ ಕಡೆ 30 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದು ಉಂಟು. ಆದುದರಿಂದ ಕಾಫಿ ಮಂಡಳಿಯಿಂದ ಕಾಫಿ ಬೆಳೆಗಾರರಿಗೆ ಅನುಕೂಲವಾಗಿಲ್ಲವೆನ್ನುವ ತಪ್ಪು ಮಾಹಿತಿ ದಾಖಲೆಗೆ ಹೋಗಬಾರದು. ಯಾವುದೇ ಮಂಡಳಿಯಲ್ಲಿ ಹಿತಾಸಕ್ತಿ ಇರತಕ್ಕ ಚುನಾಯಿತ ಸದಸ್ಯರುಗಳು ಮಂಡಳಿಯ ಸದಸ್ಯರಾಗಿದ್ದರೆ ಅದರಿಂದ ರೈತರಿಗೆ ಅನುಕೂಲವಾಗುತ್ತದೆ.

ಶ್ರೀ ಜೆ. ಹೆಚ್. ಪಟೇಲ್(ಮುಖ್ಯಮಂತ್ರಿಗಳು) : ಆ ಮಂಡಳಿಗಳ ಉದ್ದೇಶ ವ್ಯಾಪಾರ ಮಾಡಬೇಕೆಂಬುದೇ ಹೊರತು ಲಾಭ ಮಾಡಬೇಕೆಂದು ಅಲ್ಲ. ರೈತರು ಡಿಸ್ಟ್ರೆಸ್ ಸೇಲ್ ಮಾಡಬಾರದು, ಅವರನ್ನು ಪ್ರೊಟೆಕ್ಟ್ ಮಾಡಬೇಕೆನ್ನುವ ಉದ್ದೇಶದಿಂದ ಸರ್ಕಾರ ಎಂಟರ್ ಆಗುವುದು. ಅದಕ್ಕೋಸ್ಕರವೇ ಈ ಹಿಂದೆ ಉಳ್ಳಾಗೆಡ್ಡೆ ಮತ್ತು ಆಲುಗೆಡ್ಡೆ ಕೊಳೆತು ಹೋಗುವ ಪರಿಸ್ಥಿತಿ ಬರುತ್ತದೆ ಎಂದು ತಿಳಿದು ಆಗ ಸರ್ಕಾರ ಎಂಟರ್ ಆಯಿತು. ಸರ್ಕಾರ ಎಂಟರ್ ಯಾವಾಗ ಆಗುತ್ತದೆ ಆಗ ಸ್ವಲ್ಪ ವರ್ತಕರು ಉಳಿಯುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದಕ್ಕೇ ನಾನು ಹೇಳಿದ್ದುದು, ಈ ತೊಗರಿಗೂ ಅದೇ ರೀತಿಯಲ್ಲಿ ಎಂಟರ್ ಆಗಿ ಮಾರ್ಕೆಟಿಂಗ್ ಫೆಡರೇಶನ್ ಮೂಲಕ, ಫುಡ್ ಕಾರ್ಪೊರೇಶನ್ ಮೂಲಕ ನೋಡಿ ಎಂದು.

ಶ್ರೀ ಜೆ. ಹೆಚ್. ಪಟೇಲ್ : ಅದನ್ನು ಮಾಡುತ್ತಿದ್ದಾರೆ.

ಶ್ರೀ ಸಿ. ಬೈರೇಗೌಡ : ಮಾರ್ಕೆಟಿಂಗ್ ಫೆಡರೇಶನ್ ಮೂಲಕ, ಆಗ್ರೋ ಇಂಡಸ್ಟ್ರೀಸ್ ಮೂಲಕ, ಕೆ. ಒ. ಎಫ್. ಮೂಲಕ ಮತ್ತು ಫುಡ್ ಅಂಡ್ ಸಿವಿಲ್ ಸಪ್ಲೈಸ್ ಮೂಲಕ ಈ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಈ ನಾಲ್ಕು ಸಂಸ್ಥೆಗಳ ಮೂಲಕ ವ್ಯಾಪಾರ ಮಾಡುವುದಕ್ಕೆ ನಾವು ಈಗಾಗಲೇ ಹಣವನ್ನು ಒದಗಿಸುತ್ತಿದ್ದೇವೆ. ಈಗ ಬರತಕ್ಕಂಥ ಸಚಿವ ಸಂಪುಟದ ಸಭೆಯಲ್ಲಿ ಅದರ ವಿಷಯ ಬರುತ್ತಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಖರೀದಿ ಮಾಡುವುದಕ್ಕೆ ಎಷ್ಟು ದುಡ್ಡು ಇಟ್ಟಿದ್ದೀರಿ.? ಏಕೆಂದರೆ, ನಿಮ್ಮ ಹೇಳಿಕೆಯ ಪ್ರಕಾರ ಮತ್ತು ನಾನು ಎ. ಪಿ. ಎಂ. ಸಿ. ಯ ಮಾರ್ಕೆಟ್ ಯಾರ್ಡ್‌ನಿಂದ ತರಿಸಿದ ಮಾಹಿತಿಯ ಪ್ರಕಾರ 2 ಲಕ್ಷದ 85 ಸಾವಿರ ಟನ್ ಇದೆ. ಇದರೊಳಗೆ ಶೇಕಡ 50 ಭಾಗವನ್ನಾದರೂ ನೀವು ಖರೀದಿ ಮಾಡಬೇಕೆಂದರೆ ನಿಮಗೆ ದುಡ್ಡು ಬೇಕು. ಇದಕ್ಕೆ ನೀವು ಏನು ವ್ಯವಸ್ಥೆಯನ್ನು ಮಾಡಿದ್ದೀರಿ. ಎಲ್ಲಿದೆ ದುಡ್ಡು.? ಮಾರ್ಕೆಟಿಂಗ್ ಫೆಡರೇಶನ್‌ನಲ್ಲಿದೆಯೋ ಅಥವಾ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಶನ್‌ನಲ್ಲಿದೆಯೋ.

ಶ್ರೀ ಸಿ. ಬೈರೇಗೌಡ : ನಾಲ್ಕೂ ಸಂಸ್ಥೆಗಳಿಗೆ ನಾವು ಹಣವನ್ನು ಕೊಡುವವರಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಯಾವಾಗ? ಎಷ್ಟು?

ಅಧ್ಯಕ್ಷರು : ಹಣದ ವಿಚಾರವನ್ನು ಒಂದೇ ಬಾರಿಗೆ ಹೇಳುವುದಕ್ಕಾಗುತ್ತದೆಯೇ, ಅವರು ಕೊಡುತ್ತಾರೆ ಬಿಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಏಕೆಂದರೆ ಇದು ಒಂದು ತಿಂಗಳಿನಿಂದ ನಡೆದಿದೆ. ಎಲ್ಲರೂ ಅವರಿಗೆ ರೆಪ್ರೆಸೆಂಟೇಶನ್ ಕೊಡುತ್ತಿದ್ದಾರೆ.

ಅಧ್ಯಕ್ಷರು : ಈಗ ನೀವೇ ಹೇಳಿ ಕೃಷಿ ಇಲಾಖೆಗೆ ಇವರಿಗಿಂತ ಹೆಚ್ಚು ಸಿನ್ಸಿಯರ್ ಆಗಿ ಕೆಲಸ ಮಾಡತಕ್ಕಂಥ ಕನ್‌ಸರ್ನ್‌ಡ್ ಮಿನಿಷ್ಟರ್‌ನ್ನು ನಾವು ಎಲ್ಲಿಂದ ತರೋಣ ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಸಿನ್ಸಿಯರ್ ಇದ್ದಾರೆ. ಆದರೆ ತೊಗರಿ ಬೆಳೆಗೂ ಕೂಡ ಸ್ವಲ್ಪ ಕನ್‌ಸರ್ನ್‌ಡ್ ಇರಲಿ ಎಂದು ನಾನು ಹೇಳಿದೆ. ಏಕೆಂದರೆ, ಮಾನ್ಯ ಮುಖ್ಯಮಂತ್ರಿಗಳು ಆಲುಗಡ್ಡೆ ಬಗ್ಗೆ ಹೇಳಿದಾಗ ತಕ್ಷಣ ಅದರ ಬಗ್ಗೆ ಕ್ರಮ ತೆಗೆದುಕೊಂಡರು. ಅದೇ ರೀತಿಯಲ್ಲಿ ತೊಗರಿ ಬಗ್ಗೆಯೂ ಕೂಡ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು : ಅವರ ಮೇನ್ ಕನ್‌ಸರ್ನ್ ಅದು

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಆಲೂಗೆಡ್ಡೆ ಮತ್ತು ಈರುಳ್ಳಿ ಬಗ್ಗೆ ಏಕೆ ತಕ್ಷಣ ಕ್ರಮ ತೆಗೆದುಕೊಳ್ಳಲು ಸಾಧ್ಯವಾಯಿತೆಂದರೆ ಕೇಂದ್ರ ಸರ್ಕಾರದವರು ಹೇಳಿದಂತೆ ಮಿನಿಮಮ್ ಸಪೋರ್ಟ್ ಪ್ರೈಸ್‌ಗೇ ನಾವು ಕೊಟ್ಟಿರತಕ್ಕಂಥದ್ದು. ಆದರೆ ಇದು ಆ ರೀತಿಯಲ್ಲ. ಇವೊತ್ತು ವ್ಯಾಪಾರಕ್ಕೋಸ್ಕರ ಈ ಸಂಸ್ಥೆಗಳನ್ನು ತೊಡಗಿಸುತ್ತಿದ್ದೇವೆ. ಇದಕ್ಕೆ ಸಾಕಷ್ಟು ಹಣವನ್ನೂ ಕೂಡ ನಾವು ಕೊಡುತ್ತಿದ್ದೇವೆ. ಮತ್ತೊಂದು ವಿಷಯವನ್ನು ತಮ್ಮ ಗಮನಕ್ಕೆ ತರುವುದೇನೆಂದರೆ, ಈಗ ಕೆಲವು ವಿಧವಾದಂಥ ಪಲ್ಸಸ್‌ನ್ನು ಹೊರದೇಶದಿಂದ ತರಿಸುತ್ತಿದ್ದಾರೆ. ನಾನು ಕೇಂದ್ರ ಸರ್ಕಾರದ ಕಾರ್ಯದರ್ಶಿಗಳೊಡನೆ ಮಾತನಾಡಿ ಅದನ್ನು ತರಿಸಕೂಡದು ಎಂದು ಹೇಳಿದ್ದೇನೆ. ಇದನ್ನು ತರಿಸಲೇಕೂಡದು ಎಂದು ಕೇಂದ್ರ ಸರ್ಕಾರದ ಗಮನಕ್ಕೂ ತಂದಿದ್ದೇನೆ. ಇನ್ನು ಮುಂದೆ ತರಿಸುವುದಿಲ್ಲವೆನ್ನುವ ಭರವಸೆಯನ್ನೂ ಕೂಡ ಅವರು ಕೊಟ್ಟಿದ್ದಾರೆ. ಸುಗ್ಗಿ ಕಾಲದಲ್ಲಿ ಪ್ರತಿಯೊಂದರ ಬೆಲೆಯೂ ಕೂಡ ಇದೇ ರೀತಿ ಆಗುತ್ತದೆ. ಪ್ರತಿ ದಿವಸ ಯಾವುದಾದರೂ ಒಂದು ವ್ಯವಸಾಯದ ಉತ್ಪನ್ನದ ಬೆಲೆ ಕುಸಿದು ನೆಲ ಕಚ್ಚುತ್ತಿದೆ. ಪ್ರತಿ ದಿವಸವೂ ಇದು ಆಗತಕ್ಕಂಥದ್ದು ಆದುದರಿಂದ ಇದನ್ನು ರಕ್ಷಿಸುವುದಕ್ಕೆ ಆ ಸಂಸ್ಥೆಗಳನ್ನು ಬಲಪಡಿಸಲಿಕ್ಕೆ ಅನೇಕ ಕಾರ್ಯಕ್ರಮಗಳನ್ನು ನಾವು ಕೈಗೊಂಡಿದ್ದೇವೆ. ಹಣ ಕೊಡುತ್ತೇವೆ

ಶ್ರೀ ಎಂ. ಶ್ರೀನಿವಾಸ್ : ಮಾನ್ಯ ಅಧ್ಯಕ್ಷರೆ,.....

ಅಧ್ಯಕ್ಷರು : ಎಲ್ಲರಿಗೂ ಅವಕಾಶ ಕೋಡುತ್ತೇನೆ. ನೀವೇ ನೋಡಿ ಇವತ್ತು 11:15ಕ್ಕೆ ಪ್ರಾರಂಭ ಮಾಡಿದೆವು, ಕೊಶ್ಚನ್‌ಅವರ್ ಕೈಬಿಟ್ಟಿದ್ದೇವೆ. ಸುಮಾರು ಜನ ನಿಮ್ಮ ಕಡೆಯವರಿಗೆ ಅವಕಾಶ ಕೊಟ್ಟಿ. ಉಳಿದ ವಿಚಾರಗಳನ್ನು ನಾಳೆ ತೆಗೆದು ಕೊಳ್ಳೋಣ ಇವತ್ತಾದರೂ ರಾಜ್ಯಪಾಲರ ಭಾಷಣದಮೇಲೆ ಚರ್ಚೆ ಮಾಡೋಣ. ಶ್ರೀನಿವಾಸರವರೇ, ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ ಸ್ಥಳಕ್ಕೂ ಹೋಗಿ ಬಂದಿದ್ದೇನೆಂದು ಹೇಳುತ್ತಾರೆ.

ಶ್ರೀ ಎಂ. ಶ್ರೀನಿವಾಸ್ : ಆದರೆ ನನಗೆ ತಾವು ಅವಕಾಶ ಮಾಡಿಕೊಟ್ಟಾದ ಮೇಲೆ ಮಂತ್ರಿಗಳು ಉತ್ತರ ಕೊಡುವಾಗ ಹೇಳಿದರು ಅಲ್ಲದೆ ಅವರು ಸ್ಥಳ ಪರೀಕ್ಷೆ ಮಾಡಿದ ಮೇಲೆ ಉತ್ತರವನ್ನು ಹೇಳುತ್ತೇನೆ ಎಂದು ಹೇಳಿದರು.

ಅಧ್ಯಕ್ಷರು : ಇದರ ಮೇಲೆ ಚರ್ಚೆ ಬೇಡ, ಏಕೆಂದರೆ ಬಹಳ ವೇಳೆ ಹೋಗಿ ಬಿಡುತ್ತದೆ. ಈಗ ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯವನ್ನು ತೆಗೆದು ಕೊಳ್ಳೋಣ

ಶ್ರೀ ರಮೇಶ್. ಸಿ. ಜಿಗಜಿಣಗಿ : ನಾನು ಶುಕ್ರವಾರ ಹೇಳಿದ್ದೇನೆ. ಒಂದು ಸಾರಿ ನಾನು ಉತ್ತರವನ್ನು ಹೇಳಿದ ಮೇಲೆ ನಾನೇ ಖುದ್ದಾಗಿ ಸ್ಥಳ ಪರೀಕ್ಷೆಗೆ ಕರೆದು ಕೊಂಡು ಹೋಗಿ ಮಾಡುತ್ತೇನೆ ಎಂದು ಹೇಳಿದ್ದೇನೆ. ಅದರ ಪ್ರಕಾರ ಅವರನ್ನು ಕರೆದು ಕೊಂಡು ಹೋಗಿ ಸ್ಥಳ ಪರೀಕ್ಷೆ ಕೂಡ ಮಾಡಿ ಅಲ್ಲಿದ್ದ ಒಬ್ಬ ತಲೆಹರಟೆಯನ್ನು ಸಹ ಸಸ್ಪೆಂಡ್ ಮಾಡಿ ಬಂದಿದ್ದೇನೆ. ನಾನು ರಿಪ್ಲೈ ಕೊಟ್ಟಿದ್ದೇನೆ, ತಮಗೂ ಉತ್ತರ ಕಳುಹಿಸಿದ್ದೇನೆ.

ಶ್ರೀ ಎಂ. ಶ್ರೀನಿವಾಸ್ : ಆ ಜಮೀನನ್ನು ಸರ್ಕಾರದವರು ಮಾರಾಟ ಮಾಡಿರುವುದು ನಿಜಾ ಎಂದಾಯ್ತಲ್ಲ.

ಶ್ರೀ ರಮೇಶ್. ಸಿ. ಜಿಗಜಿಣಗಿ : ನಾನು ಅವರ ಜೊತೆ ಹೋಗಿ ಬಂದಿದ್ದೇನೆ. ಈಗಾಗಲೇ ಅದೇ ಜಮೀನು ವಿಚಾರದಲ್ಲಿ ಸಿ. ಓ. ಡಿ. ವಿಚಾರಣೆ ಆಗುತ್ತಿದೆ. ನಾನು ನಿನ್ನೆ ಸ್ಥಳ ಪರೀಕ್ಷೆ ಮಾಡಿ ಬಂದ ಜಮೀನಿನ ಬಗ್ಗೆ ಸಿ. ಓ. ಡಿ ತನಿಖೆ ನಡೆಯುತ್ತಿದೆ. ನಾನು ರೆವಿನ್ಯೂ ಕಮೀಷನರ್‌ಗೆ ಸಿ. ಓ. ಡಿ. ರಿಪೋರ್ಟ್ ಬಂದರೆ ತಕ್ಷಣ ಕಳುಹಿಸಬೇಕೆಂದು ಹೇಳಿ ಸೂಚನೆ ಕೂಡ ಕೊಟ್ಟು ಬಂದಿದ್ದೇನೆ. ಸಿ. ಓ. ಡಿ. ತನಿಖೆ ಏನು ನಡೆಯುತ್ತಿದೆ ಅದರ ರಿಪೋರ್ಟ್ ಬಂದರೆ ಅದನ್ನು ಕೂಡಲೇ ಕಳುಹಿಸಿ ಎಂದು ರೆವಿನ್ಯೂ ಕಮಿಷನರಿಗೆ ಇವತ್ತು ಬೆಳಿಗ್ಗೆ ಕೂಡ ಫೋನ್ ಮಾಡಿದ್ದೇನೆ.

ಅಧ್ಯಕ್ಷರು : ಬೆಳಿಗ್ಗೆ ಸದಸ್ಯರುಗಳಾದ ರಾಮ್‌ದಾಸ್‌ರವರು ಸುರೇಶ್‌ಕುಮಾರ್‌ರವರು ಬಂದಿದ್ದರು, ಶ್ರೀ ನಾಣಯ್ಯನವರು ಮಾನ್ಯ ಬೆಳ್ಳಿಯಪ್ಪನವರ ಅಂತ್ಯಕ್ರಿಯೆಗೆ ಹೊಗಿದಂಥವರು ನಿನ್ನೆ ಬಂದರು. ಬೆಳಿಗ್ಗೆ ನಾನು ಎಲ್ಲಾ ವಿಚಾರವನ್ನು ಅವರ ಗಮನಕ್ಕೆ ತಂದೆ. ತಕ್ಷಣ ಅವರು ಆಕ್ಟ್ ತರಿಸಿಕೊಂಡರು. ಮೇಲ್ನನೆಯಲ್ಲಿ ಅವರದು ಒಂದೆರಡು ಪ್ರಶ್ನೆಗಳಿವೆ ಎಂದು ಹೇಳಿ ಹೋಗಿದ್ದಾರೆ. ಅವರು ಬರಲಿ. He is already at it. I have told him to get in touch with the secrelary also. He will explain the position of the Government.

ಶ್ರೀ ಎ. ರಾಮದಾಸ್ : ಸಚಿವರು ಈಗಾಗಲೇ ಉತ್ತರವನ್ನು ಕೊಟ್ಟಿದ್ದಾರೆ, ಇದರ ಬಗ್ಗೆ ಮಾನ್ಯ ಸಚಿವರು ಏನು ಉತ್ತರವನ್ನು ತಯಾರು ಮಾಡಿದ್ದಾರೆ ದಯವಿಟ್ಟು ಅದನ್ನು ಓದಲಿ.

ಅಧ್ಯಕ್ಷರು : ಮೊದಲು ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಆಗಲಿ. ನಮ್ಮದೊಂದು ಅಜೆಂಡಾ ಇರುತ್ತದಲ್ಲ, ಒಬ್ಬೊಬ್ಬರು ಒಂದೊಂದು ಚೀಟಿ ತನ್ನಿ, ನಾನು ಅಜೆಂಡಾ ಎಲ್ಲಾ ತೆಗೆದು ತಿಪ್ಪೆಗೆ ಬಿಸಾಕುತ್ತೇನೆ. ಆಮೇಲೆ ನಮ್ಮದೊಂದು ಅಜೆಂಡಾ ಇಲ್ಲವೇ ಶೂನ್ಯ ವೇಳೆ ಮುಗಿಯಿತು. ಅದಕ್ಕೆ ಉತ್ತರ ಕೊಡಿಸೋಣ.

ಶ್ರೀ ಬಿ. ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಉಳ್ಳಾಗಡ್ಡಿ ಧಾರಣೆ ಕಡಿಮೆಯಾದಾಗ ರೈತರಿಗೆ ತೊಂದರೆಯಾಗಬಾರದೆಂದು ತಿಳಿದುಕೊಂಡು ಸರ್ಕಾರ ಪಾರ್ಟಿಸಿಪೇಟ್ ಮಾಡಿದೆ. ಅದಕ್ಕಾಗಿ ಧನ್ಯವಾದಗಳು. ಆದರೆ ಅನೇಕ ಷರತ್ತುಗಳನ್ನು ಹಾಕಿರುವುದರಿಂದ ರೈತರಿಗೆ ಬಹಳ

ತೊಂದರೆ ಆಗಿದೆ. ಕಂಡಿಷನ್‌ಗಳು ಬಹಳ ಇವೆ. ಇಷ್ಟೇ ಗೋಲು ಇರಬೇಕು, ಇಷ್ಟೇ ತೂಕ ಇರಬೇಕು ಹೇಗೆ ಇರಬೇಕು ಹಾಗೆ ಇರಬೇಕು ಎಂದು ಕಂಡೀಷನ್‌ಗಳಿವೆ. ಒಂದುನೂರು ಕ್ವಿಂಟಾಲ್ ಮಾರಲಿಕ್ಕೆ ತಂದರೆ 99 ಕ್ವಿಂಟಾಲ್ ಹೋಗಿಬಿಡುತ್ತದೆ, ಅದು ಒಂದು ಕ್ವಿಂಟಾಲ್ ಆಗುತ್ತದೆ. ದಯವಿಟ್ಟು ಆ ಷರತ್ತುಗಳನ್ನು ಸ್ವಲ್ಪ ಸಡಿಲಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಇದು ಒಂದು ಒಳ್ಳೆಯ ಸಲಹೆ.

ಶ್ರೀ ಸಿ. ಬೈರೇಗೌಡ : ನಿರ್ದಿಷ್ಟವಾಗಿ ಹಾಗೆ ಯಾವ ಮಾರುಕಟ್ಟೆಯಲ್ಲಿ ನಡೆಯುತ್ತಿದೆ ಎಂಬುದನ್ನು ಹೇಳಿದರೆ ನಾವು ಕ್ರಮ ಕೈಗೊಳ್ಳುತ್ತೇವೆ.

ಅಧ್ಯಕ್ಷರು : ಸಾಮಾನ್ಯವಾಗಿ ಅವರ ಮೆಂಟಾಲಿಟಿ ಹಾಗಿರುತ್ತದೆ. ಹಾಫ್‌ಕಾಮ್ಸ್ ಕೂಡ ಅಷ್ಟೆ. ಏನಾದರೂ ಮಾಲು ತೆಗೆದುಕೊಂಡು ಹೋದರೆ ಅದು ಚೆನ್ನಾಗಿಲ್ಲ, ಇದು ಚೆನ್ನಾಗಿಲ್ಲ ಎಂದು ಅವರು ಡಿಸ್‌ಕರೇಜ್ ಮಾಡುವುದು, ಒಂದು ತರಹ ಅಸಡ್ಡೆ ತೋರುವುದು ಎಲ್ಲಾ ಕಡೆ ನಡೆದಿದೆ.

ಶ್ರೀ ಸಿ. ಬೈರೇಗೌಡ : ಸರ್ಕಾರ ಅದನ್ನು ಗಮನಿಸಿದೆ.

ಅಧ್ಯಕ್ಷರು : ತಾವು ಪಟೇಲರು ಮಂತ್ರಿಗಳನ್ನು ಭೇಟಿಯಾಗಿ ಯಾವ ಯಾವ ಮಾರುಕಟ್ಟೆಯಲ್ಲಿ ಆ ಸಮಸ್ಯೆ ಇದೆ ಎಂದು ತಿಳಿಸಿದರೆ ತಕ್ಷಣ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಎ. ಮುನಿಯಪ್ಪ : ಮಾನ್ಯ ಅಧ್ಯಕ್ಷರೆ, ರಾಜ್ಯ ಸರ್ಕಾರ ಕರ್ನಾಟಕ ರೇಷ್ಮೆ ಹುಳು, ರೇಷ್ಮೆ ತಳಿ, ರೇಷ್ಮೆ ಗೂಡು, ರೇಷ್ಮೆ ನೂಲು ಉತ್ಪಾದನೆ ಸರಬರಾಜು ಹಂಚಿಕೆ ಮತ್ತು ಮಾರುಕಟ್ಟೆ ನಿಯಂತ್ರಣಕ್ಕೆ ಒಂದು ತಿದ್ದುಪಡಿ ತಂದಿದೆ.

ಅಧ್ಯಕ್ಷರು : ನಾನು ಮಂತ್ರಿಗಳನ್ನು ಕರೆಯಿಸಿ ಮಾಡನಾಡಿದೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಆ ವಿಧೇಯಕದ ಮೇಲೆ ಭಾಷಣ ಮಾಡಬೇಕು ಎಂದು ಬಂದಿದ್ದರು. ಇವತ್ತು ಆ ವಿಧೇಯಕವನ್ನು ನಾವು ತೆಗೆದುಕೊಳ್ಳುವುದಿಲ್ಲ ನಂತರ ಮುಖ್ಯಮಂತ್ರಿಗಳ ಹತ್ತಿರ ಮತ್ತು ಉಪ ಮುಖ್ಯಮಂತ್ರಿಗಳ ಹತ್ತಿರ ಮಾತನಾಡಿ ಆಮೇಲೆ ತೆಗೆದುಕೊಳ್ಳೋಣ. ಬೆಳಗ್ಗೆ ನಿಯೋಗದಲ್ಲಿ ಪ್ರಕಾಶ್ ಅವರು ಯಾರನ್ನು ಕರೆದುಕೊಂಡು ಬಂದಿದ್ದರು ಅವರು ಮತ್ತಿತರ ಎಲ್ಲ ಜನರನ್ನು ಕೂಡ ಮಂತ್ರಿಗಳ ಛೇಂಬರಿನಲ್ಲಿ ಸಭೆ ಕರೆಸಿ ಚರ್ಚೆ ಮಾಡಿಯಾದ ಮೇಲೆ ತೆಗೆದುಕೊಳ್ಳೋಣ. ಈಗ ರಾಜ್ಯಪಾಲರ ಭಾಷಣಕ್ಕೆ ಸಂಬಂಧಪಟ್ಟ ವಂದನಾ ನಿರ್ಣಯದ ಮೇಲೆ ಮಾನ್ಯ ವಾಟಾಳ್ ನಾಗರಾಜರವರು ತಮ್ಮ ಭಾಷಣ ಪ್ರಾರಂಭ ಮಾಡಲಿ. ಅವರಿಗೆ 40 ನಿಮಿಷ ಕೊಡುತ್ತಿದ್ದೇನೆ. ಅಂದರೆ ನಮ್ಮ ನಿಯಮಾವಳಿಗಳ ಪ್ರಕಾರ ಅಷ್ಟು ಸಮಯ ಬರುವುದಿಲ್ಲ. ಅವರು ಉದಾರವಾಗಿ ಅವರ ಸಮಯವನ್ನು ಎರವಲು ಕೊಟ್ಟಿದ್ದಾರೆ. ಏಕೆಂದರೆ ಬೇರೆಯವರು ನಿಮ್ಮ ಹಿಂದೆ ಬಿದ್ದು ತಕರಾರು ಮಾಡಬಾರದು ಎಂದು. ನಾವು ಯಾರೂ ಇಂಟರ್‌ಫಿಯರ್ ಆಗುವುದಿಲ್ಲ ಭಾಷಣ ಅಚ್ಚು ಕಟ್ಟಾಗಿ ಎಲ್ಲರೂ ಮೆಚ್ಚಬೇಕು, ಎಲ್ಲಾ ಪತ್ರಿಕೆಗಳಲ್ಲಿ ಮುಖಪುಟಗಳಲ್ಲಿ ಬರಬೇಕು, ಹಾಗೆ ಭಾಷಣ ಮಾಡಿ.